# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಲಗ್ಗೆರೆ ಉಪವಿಭಾಗ

## ಕೊಟ್ಟಿಗೆಪಾಳ್ಯ ವಾರ್ಡ್ ಸಮಿತಿ ಸಭೆ

ದಿನಾಂಕ 28.10.2020 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀ ವಿಜಯ ಕುಮಾರ್, ಮುಖ್ಯ ಅಭಿಯಂತರರು, ಸಮಿತಿ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಕೆಗಳು.

ಕಾರ್ಯಸೂಚಿ ವಿಷಯಗಳು:-

ವಾರ್ಡ್-73ರ ಸಾರ್ವಜನಿಕರ ಕುಂದುಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿ ಕುರಿತಂತೆ ಚರ್ಚಿಸಲು ಹಾಗೂ ನಿರ್ಣಯಿಸಲು.

ಸಭೆಗೆ ಹಾಜರಿದ್ದ ಅಧಿಕಾರಿಗಳು:-

ಶ್ರೀ ವಿಜಯ ಕುಮಾರ್, ಮುಖ್ಯ ಅಭಿಯಂತರರು ರಾರಾನಗರ, ಶ್ರೀ. ನವೀನ್ ಆರ್, ಸಹಾಯಕ ಅಭಿಯಂತರರು, ಕೊಟ್ಟಿಗೆಪಾಳ್ಯ ವಾರ್ಡ್, ಶ್ರೀ ವಿಶ್ವನಾಥ್ ಎ.ಇ, (ಬಿ ಡ್ಬ್ಲೂ ಎಸ್ ಎಸ್, ಬಿ), ಶಂಕರ್ ಲಿಂಗಯ್ಯ, ಸಹಾಯಕ ಅಭಿಯಂತರರು, ಬೆಸ್ಕಾಂ, ಶ್ರೀ ನಂಜುಂಡಪ್ಪ ಹಿರಿಯ ಆರ್ಯೋಗ್ಯ ಪರಿವೀಕ್ಷಕರು ಹಾಗೂ ಶ್ರೀ. ವಿಜಯ ರಾಘವನ್,ಕಿರಿಯ ಆರ್ಯೋಗ್ಯ ಪರಿವೀಕ್ಷಕರು.

ಮಾನ್ಯ ಅಧ್ಯಕ್ಷರು ಶ್ರೀ ವಿಜಯ ಕುಮಾರ್, ಮುಖ್ಯ ಅಭಿಯಂತರರು ರಾರಾನಗರ ರವರ ಅನುಮತಿ ಮೇರೆಗೆ ಹಾಜರಿದ್ದ ಅಧಿಕಾರಿಗಳ ಜೊತೆ ವಾಡ್.73ರ ವಾರ್ಡ್ ಕಮಿಟಿ ಸಭೆಗೆ ಆಗಮಿಸಿದ್ದ ಸದಸ್ಯ ಕಾರ್ಯದರ್ಶಿರವರು ಉಚ್ಚನ್ಯಾಯಾಲಯದ ಆದೇಶದ ಮೇರೆಗೆ ಪ್ರತಿ ತಿಂಗಳು ವಾರ್ಡ್ ಸಮಿತಿ ಸಭೆಯನ್ನು ನಡೆಸುತ್ತಿದ್ದು ಅದರಂತೆ ಇಂದು ಸಹ ಸಭೆ ನಡೆಸಲಾಗುತ್ತಿದೆ. ಸಭೆಗೆ ಆಗಮಿಸಿದ ಅಧ್ಯಕ್ಷರಿಗೆ ಸ್ವಾಗತ ಕೋರಿ ಹಾಗೂ ಸಭೆಗೆ ಅಗಮಿಸಿದ ಬಿಬಿಎಂಪಿ ಸಿಬ್ಬಂದಿ ವರ್ಗದವರಿಗೆ ಬೇರೆ ಬೇರೆ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಸ್ವಾಗತ ಕೋರಿದ ಕಾರ್ಯದರ್ಶಿಗಳು ಹಾಗೂ ಅಧಿಕಾರಿಗಳಿಂದ ಹಾಜರಾತಿ ಪಡೆದು ಸಭೆ ಪ್ರಾರಂಭಿಸಿದರು. ಹಾಗೂ ವಾರ್ಡ್-73ರ ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿ ಮತ್ತು ಈ ಕೆಳಕಂಡ ವಿವರಗಳನ್ನು ಕುರಿತು ಚರ್ಚಿಸಲಾಯಿತು.

1. ಮುಖ್ಯ ಅಭಿಯಂತರರು ಶ್ರೀ ವಿಜಯ ಕುಮಾರ್ ರವರು ನಾಗರಭಾವಿ 11ನೇ ಬ್ಲಾಕ್ 80 ಅಡಿ ರಸ್ತೆಯಲ್ಲಿ ಛೇಂಬರ್‌ಗಳಿಂದ ಆದ ರಸ್ತೆ ತಗ್ಗನ್ನು ಸರಿಪಡಿಸಲು ಹಾಗೂ ಯಾವುದೇ ರೀತಿಯ ರಸ್ತೆ ಅಗೆತಗಳನ್ನು ಅನುಮತಿ ಪಡೆಯದೇ ಮಾಡಬಾರದೆಂದು ಶ್ರೀ ವಿಶ್ವನಾಥ್ ಎ.ಇ, (ಬಿ ಡ್ಬ್ಲೂ ಎಸ್ ಎಸ್, ಬಿ)ರವರಿಗೆ ತಿಳಿಸಿರುತ್ತಾರೆ.

2. ಮುಂದುವರೆದು ಘನತ್ಯಾಜ್ಯ ಆರೋಗ್ಯ ಪರಿವೀಕ್ಷಕರು ಶ್ರೀ ನಂಜುಂಡಪ್ಪ (ಹಿರಿಯ) ಹಾಗೂ ಶ್ರೀ. ವಿಜಯ ರಾಘವನ್(ಕಿರಿಯ) ರವರಿಗೆ ಚೌಡೇಶ್ವರಿನಗರ ಪೈಪ್‌ಲೈನ್ ರಸ್ತೆಯಲ್ಲಿ ಕಸಹಾಕುವುದನ್ನು ತಪ್ಪಿಸುವ ಬಗ್ಗೆ, ಘನತ್ಯಾಜ್ಯ ಆರೋಗ್ಯ ಪರಿವೀಕ್ಷಕರು ಈ ಮೇಲಿನ ಎಲ್ಲಾ ಸಮಸ್ಯೆಗಳನ್ನು ಅತಿ ಜರೂರಾಗಿ ಬಗೆಹರಿಸಿ ಉತ್ತರ ನೀಡಿ ಎಂದು ಅಧ್ಯಕ್ಷರು ಘನತ್ಯಾಜ್ಯ ಆರೋಗ್ಯ ಪರಿವೀಕ್ಷಕರು ಶ್ರೀ ನಂಜುಂಡಪ್ಪ ರವರಿಗೆ ತಿಳಿಸಿರುತ್ತಾರೆ.

3. ಮುಂದುವರೆದು ಬೆಸ್ಕಾಂ ಕಿರಿಯ ಅಭಿಯಂತರರು ಶಂಕರ್‌ಲಿಂಗಯ್ಯ ರವರಿಗೆ, 11ನೇ ಬ್ಲಾಕ್‌ನಲ್ಲಿ ವಿದ್ಯುತ್ ವ್ಯತ್ಯಯದ ಬಗ್ಗೆ ಗಂಭೀರವಾಗಿ ಪರಿಗಣಿಸಲು ತಿಳಿಸಿರುತ್ತಾರೆ.

4. ಈ ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ ಎಲ್ಲಾ ಕೆಲಸಗಳು ನಿರ್ವಹಿಸುವಂತೆ ಮಾನ್ಯ ಅಧ್ಯಕ್ಷರು ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದರು.

ಚುನಾವಣೆಯ ಕಾರಣದಿಂದ ಸಭೆಗೆ ಬಹಳಷ್ಟು ಅಧಿಕಾರಿಗಳು ಹಾಜರಾಗಲು ಸಾಧ್ಯವಾಗದೇ ಇರುವುದರಿಂದ ಮುಂದಿನ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ಅಧ್ಯಕ್ಷರು ಶ್ರೀ ವಿಜಯ ಕುಮಾರ್ ರವರ ಅಪ್ಪಣೆಯ ಮೇರೆಗೆ ದಿನಾಂಕ 07.11.2020 ರಂದು ಬೆಳಿಗ್ಗೆ 11.00 ಗಂಟೆಗೆ ನಿಗದಿಪಡಿಸಲಾಗಿದೆ ಎಂದು ತಿಳಿಸಿ ವಂದನಾರ್ಪಣೆ ಮಾಡಿ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು
ಕೊಟ್ಟಿಗೆಪಾಳ್ಯ ವಾರ್ಡ್–73

ಪ್ರತಿಗಳನ್ನು:-

1. ಮಾನ್ಯ ಆಯುಕ್ತರ, ರವರ ಅವಗಾಹನೆಗೆ ಸಲ್ಲಿಸಲಾಗಿದೆ.
2. ವಾರ್ಡ್ ಸಂಖ್ಯೆ–73ರ ಸಮಿತಿ ಅಧ್ಯಕ್ಷರು.
3. ಮಾನ್ಯ ಜಂಟಿ ಆಯುಕ್ತರು, ರಾಜಾನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಲಾಗಿದೆ.
4. ಮಾನ್ಯ ಮುಖ್ಯ ಅಭಿಯಂತರರು, ರಾಜಾನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಲಾಗಿದೆ.
5. ಕೌನ್ಸಿಲ್ ಕಾರ್ಯದರ್ಶಿ, ರವರ ಅವಗಾಹನೆಗೆ ಸಲ್ಲಿಸಲಾಗಿದೆ.
6. ಕಾರ್ಯಪಾಲಕ ಅಭಿಯಂತರರು, ರಾಜಾನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಲಾಗಿದೆ.
7. ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡ್ಬ್ಲ್ಯೂ.ಎಸ್.ಎಸ್.ಬಿ, ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ, ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
10. ಪೋಲೀಸ್ ಇನ್ಸಪೆಕ್ಟರ್, ಕಾಮಾಕ್ಷಿಪಾಳ್ಯ ಠಾಣೆ, ನಾಗರಬಾವಿ ರವರ ಮಾಹಿತಿಗಾಗಿ ಸಲ್ಲಿಸಿದೆ.